ಇಂಥ ಸಾಮರಸ್ಯದ ಸುಖೀಕುಟುಂಬ ನೀಲಕಂಠ ಆಕಸ್ಮಿಕವಾಗಿ ಲಾರಿ ಅಪಘಾತದಲ್ಲಿ ಅಸು ನೀಗಿದಾಗ ತತ್ತರಿಸಿಬಿಟ್ಟಿತ್ತು. ಊರವರೆಲ್ಲ ಮರುಗಿದರೂ ಅನುಭವಿಸಬೇಕಾದದ್ದು ನೀಲಕಂಠನನ್ನ ಅವಲಂಬಿಸಿದವರಲ್ಲವೇ. ಹತ್ತು ವರ್ಷದ ಪೋರ, ಆರು ವರ್ಷದ ಮಗಳನ್ನ ಒಂಟಿಯಾಗಿ ಸಲಹಬೇಕಾದ ಅನಿವಾರ್ಯತೆ ಸಾವಿತ್ರಿಗೆ ಒದಗಿತ್ತು. ವಾರಗಳ ಕಾಲ ಗಂಡನ ಅಗಲುವಿಕೆಯ ಜೊತೆಗೆ ಈ ವಿಪತ್ತನ್ನು ಹೇಗೆ ನಿಭಾಯಿಸುವದಪ್ಪಾ ಎನ್ನುವ ಸಂಕಟದಲ್ಲಿ ಸಾವಿತ್ರಿ ಒದ್ದಾಡಿದರೂ ಎದುರಾದ ಕಠೋರ ವಾಸ್ತವವನ್ನು ನಿಧಾನಕ್ಕೆ ಎದುರಿಸತೊಡಗಿದಳು. ಶೆಟ್ಟಿ ಕಂಟ್ರಾಕ್ಟರ್ ನೀಲಕಂಠನ ಸೇವೆಯ ಕೃತಜ್ಞತೆಗೆಂದು ಕೊಟ್ಟ ದೊಡ್ಡ ಮೊತ್ತದ ಹಣವನ್ನ ಹಾಗೇ ಇರಿಸಿದಳು. ತನ್ನ ಮೊದಲಿನ ಕೆಲಸದ ಜೊತೆಗೆ ನಾಲ್ಕಾರು ಮನೆಗೆಲಸ ಹಿಡಿದಳು. ತಾನು ಕೆಳಮಟ್ಟಕ್ಕೆ ಇಳಿದೆ ಎನ್ನುವ ಯಾವ ಭಾವವನ್ನೂ ತೋರದೇ ಮಕ್ಕಳ ಬದುಕಿನ ಬಗ್ಗೆ ಕಾಳಜಿಯಿಟ್ಟು ದುಡಿಯತೊಡಗಿದಳು. ಮನೆಯ ಅಂಗಳದಲ್ಲಿ ಹತ್ತಾರು ಕಾಕಡ ಮಲ್ಲಿಗೆ ಗಿಡ ಬೆಳೆಸಿ, ಮೊಗ್ಗು ಕೊಯ್ದು ಮಾರಿದಳು. ಹಿತ್ತಲಿನಲ್ಲಿ ಬಸಳೆ ಚಪ್ಪರ ಎಬ್ಬಿಸಿ ಸೊಂಪಾಗಿ ಬೆಳೆಸಿ ಮಾರಿದಳು. ಹೀಗೇ ಪ್ರತಿ ನಿಮಿಷವನ್ನೂ ನಿಜಗೊಳಿಸಿಕೊಳ್ಳುತ್ತ ಬಂದ ತಾಯಿಯ ಶ್ರಮವನ್ನ ಮನೋಹರ ಚಿಕ್ಕವನಿರುವಾಗಲೇ ನೋಡುತ್ತ ಬಂದದ್ದಕ್ಕಿರಬೇಕು ಹೈಸ್ಕೂಲಿಗೆ ಕಾಲಿಡುತ್ತಿದ್ದಂತೇ ಪಾರ್ಟ್ ಟೈಂ ಕೆಲಸ ಮಾಡಲು ಅಮ್ಮನಿಗೆ ದುಂಬಾಲು ಬಿದ್ದ. 'ನೀ ಎಂಥ ಇಷ್ಟು ಸಣ್ಣ ವಯಸ್ಸಿಗೆ ದುಡಿಬೇಕೋ? ನಾ ಗಟ್ಟಿ ಇರೂತನಕಾ' ಎಂದರೂ ಕೇಳದೇ ವರಾತ ಹಚ್ಚಿದ. ಅಷ್ಟು ಸಣ್ಣ ಪೇಟೆಯಲ್ಲಿ ಇವನಿಗೆಂಥ ಕೆಲಸ ಸಿಕ್ಕೀತು? ಶಾಲೆ ಮುಗಿಸಿ, ಆ ನಂತರ ಬರುವ ಈ ಹುಡುಗನನ್ನು ಯಾವ ಕಿರಾಣಿ ಅಂಗಡಿಯವರು, ಹೊಟೇಲ್‌ನವರು ಇರಿಸಿಕೊಂಡಾರು? ಇಷ್ಟು ಸಣ್ಣ ಮಗುವಿಗೆ ಭಾರದ ಕೆಲಸ ಹಿಡಿಸಿದರೆ ಸರಿಹೋಗಲಿಕ್ಕಿಲ್ಲ ಎಂದೆಲ್ಲ ಸಾವಿತ್ರಿ ಚಿಂತಿಸಿದಳು. ಆದರೆ ಮನೋಹರನ ಒಲವು ಬೇರೆಯೇ ಇತ್ತು. ಅವನಿಗೆ ಶಾಲೆಯಲ್ಲೂ ಕರಕುಶಲತೆಯಲ್ಲಿ ಆಸಕ್ತಿಯಿದ್ದ ಕಾರಣ ಪೇಟೆಗೆ ಹೋದಾಗೆಲ್ಲ ಶೀನಪ್ಪನ ಬಾಸಿಂಗದ ಅಂಗಡಿ ಕಡೆಗೆ ದೃಷ್ಟಿ ಹಾಯಿಸುತ್ತಿದ್ದ.

ಶೀನಪ್ಪನದು ಸೀಜನ್ನಿಗೆ ಹೊಂದಿಕೊಂಡ ಕಸುಬು. ಮದುವೆ ಗೌಜಿಯಲ್ಲಿ ಅಬ್ಬರದ ಕೆಲಸ ಅವನದು. ಪುರುಸೊತ್ತಿಲ್ಲದಂತೆ ದುಡಿಯುತ್ತಿದ್ದ ಆತ ಮಳೆಗಾಲ ಶುರುವಾಗುತ್ತಿದ್ದಂತೆ ಗಣಪತಿ ಮೂರ್ತಿ ಮಾಡಲು ಕೂರುತ್ತಿದ್ದ; ಆ ಭಾಗಕ್ಕೆ ಈತನೊಬ್ಬನೇ ಗಣಪತಿ ಮಾಡುವ ಕಾರಣ ಆ ಕೆಲಸದ್ದೂ ಅಬ್ಬರವೇ. ಅದು ಮುಗಿದರೆ ವಿರಾಮವಾಗಿ ಗಂಧದ ಹಾರ, ದೇವರ ಪೀಠದ ಕೆತ್ತನೆ, ಕುಸುರಿ ಮುಂತಾಗಿ. ಅಂಥ ಸೂಕ್ಷ್ಮ ಕೆಲಸಗಳನ್ನೂ ಚಕಚಕನೆ ಮಾಡುತ್ತಿದ್ದ ಶೀನಪ್ಪನ ಕಾರ್ಯವೈಖರಿ ಮನೋಹರನನ್ನು ಸೆಳೆದಿತ್ತು. ತಾಯಿಯ ಬಳಿ ಶೀನಪ್ಪನನ್ನು ಕೇಳಿ ಕೆಲಸ ಕೊಡಿಸು ಎಂದು ಬಲವಂತ ಮಾಡಿದ. ಮಗನನ್ನು ಕರೆದುಕೊಂಡು ಶೀನಪ್ಪನ ಅಂಗಡಿ ಸಮೀಪವೇ ಇದ್ದ ಬಾಬಣ್ಣನಲ್ಲಿ ಹೋದಳು. ಅವನು ಬಂದು ಶೀನಪ್ಪನ ಜೊತೆ ಮುಖತಃ ಮಾತನಾಡಿದಾಗ ಅಷ್ಟೇನೂ ವ್ಯವಹಾರಸ್ಥನಲ್ಲದ ಶೀನಪ್ಪ ನಿಜವನ್ನೇ ಹೇಳಿದ್ದ. 'ಶಾಲೆ ಮುಗಿಸಿ ಬಂದಮೇಲಿನ ಎರಡು ತಾಸಿನ ಕೆಲಸಕ್ಕೆ ದಿನದ ಪಗಾರ ಕೊಡೋದು ನನಗೆ ಕಷ್ಟ. ದೇವರು ಮೆಚ್ಚುವಂತೆ ಕೊಡ್ತೇನೆ. ಮೊದಲು ಕೆಲಸ ಕಲೀಬೇಕು. ಕೆಲಸವನ್ನ ವಂಚನೆಯಿಲ್ಲದೇ ಕಲಿಸ್ತೇನೆ' ಎಂದ ಆತನ ಮಾತಿಗೆ ಬಾಬಣ್ಣನೂ ದನಿಗೂಡಿಸಿದ್ದ. 'ಇಂಥ ಕೆಲಸದ ಮೂಲಕವಾದರೂ ಈ ಪುಟ್ಟ ಪೋರ ಬದುಕಿನ ಬಗ್ಗೆ ಶ್ರದ್ಧೆ ಬೆಳೆಸಿಕೊಳ್ಳಲಿ. ಈಗಲೇ ಇವ ಏನು ದುಡಿದು ತರೋದು ಬೇಡ. ಹಾದಿ ತಪ್ಪದ ಹಾಗೇ ಬೆಳೆಯೋದು ಮುಖ್ಯ' ಅಂದ. ಸಾವಿತ್ರಿಗೂ ಹೌದೆನ್ನಿಸಿ ಒಪ್ಪಿದ್ದಳು.

ಹೈಸ್ಕೂಲು ಮುಗಿಯುತ್ತಿದ್ದಂತೆ ಸಾವಿತ್ರಿ ಅಲ್ಲದೇ ಅವರ ಹಿತೈಷಿಗಳು ಎಷ್ಟೇ ಒತ್ತಾಯಿಸಿದರೂ ಮನೋಹರ ಮುಂದೆ ಓದಲು ಒಪ್ಪಲಿಲ್ಲ. ದಿನದ ಎರಡು ತಾಸಿನಲ್ಲೇ ಈವರೆಗೆ ಸಾಕಷ್ಟು ಕೆಲಸ